# ಸ್ಪಂದನ Spandana




**ಕನ್ನಡ ಸಂಘ ಹಾಂಗ್ ಕಾಂಗ್ ನ ಮಾಸಪತ್ರಿಕೆ – ಏಪ್ರಿಲ್ & ಮೇ 2024**

**Kannada Sangha Hong Kong's Monthly Newsletter – April & May 2024**

**ಸಂಚಿಕೆ 2**

## ಪ್ರಮುಖಾಂಶಗಳು
## Quick Highlights

- ಬನ್ನಿ ಕೇಳೋಣ ಪದ್ಯ
- ಕಥೆಯೊಂದು ಕೇಳೋಣ
- ಕರ್ನಾಟಕ ತಿಳಿಯೋಣ
- ಅಜ್ಜಿ ಹೇಳಿದ ಕಥೆಗಳು
- ಬಾ ಮಳೆಯೇ ಬಾ
- ಮೆದುಳಿಗೆ ಸ್ವಲ್ಪ ಕೆಲಸ!
- ಚಿಣ್ಣರ ಚಿಲಿಪಿಲಿ
- ಸಾಮಾಜಿಕ ಜಾಲತಾಣ
- ಪ್ರಾಯೋಜಕರು

---

- Poem Time
- Story Time
- Karnataka Diaries
- Granny's stories
- Rainy Days
- Scratch your head
- Kids corner
- Social media
- Sponsorer

## ನಿಮ್ಮ ಸ್ಪಂದನ ಮತ್ತೆ ಪ್ರಾರಂಭವಾಗುತ್ತಿದೆ!

ನಮ್ಮ ಸಮುದಾಯದ ಮಕ್ಕಳಿಗೆ  ಹಾಗೂ ನಮ್ಮ ಪ್ರೀತಿಯ ಸದಸ್ಯರಿಗೆ ಈ ಸಂಚಿಕೆ ಅರ್ಪಣೆ. ಸ್ಪಂದನ ಮಯಾಸಪತ್ರಿಕೆಗೆ ನೀವು ಯಾವುದೇ ರೀತಿಯಲ್ಲಿ ಕೂಡ ಕೊಡುಗೆ ನೀಡಬಹುದು: ಮಕ್ಕಳ ಆಟ-ಪಾಠಗಳು, ಕಲೆ, ಸಾಹಿತ್ಯ, ಅನುಭವಗಳು, ಪ್ರಬಂಧ, ಪದ್ಯ, ಕಥೆ, ಚಿತ್ರಕಲೆ, ಇಥ್ಯಾದಿಗಳನ್ನು ಬರೆದು ನಮಗೆ ಕಳುಹಿಸಿ. ಈ ಅಂತರ್ಜಾಲ ಸಮುದಾಯ ಮಾಧ್ಯಮವನ್ನು ಒಂದು ಉತ್ತಮ ವೇದಿಕೆಯಾಗಿ ನಾವೆಲ್ಲರೂ ಉಪಯೋಗಿಸಿಕೊಳ್ಳೋಣ. ಈ ಸಂಚಿಕೆಗೆ ಲೇಖನಗಳನ್ನು ಕಳುಹಿಸಿದ ಎಲ್ಲಾ ಸ್ನೇಹಿತರಿಗೂ ಧನ್ಯವಾದಗಳು. ನಿಮ್ಮಿಂದ ಹೆಚ್ಚಿನ ಕೋಡುಗೆಯನ್ನು ಮುಂದಿನ ಸಂಚಿಕೆಗಳಲ್ಲಿ ನಿರೀಕ್ಷಿಸುತ್ತೇವೆ!



## ಸಂಪರ್ಕಿಸಿ
## Contact Us

ಸ್ಪಂದನ ಮಾಸ ಪತ್ರಿಕೆಗೆ ನೀವು ಯಾವುದೇ ರೀತಿಯಲ್ಲಿ ಕೊಡುಗೆ ನೀಡಲು ಇಚ್ಛಿಸುವಲ್ಲಿ, ನಿಮ್ಮ ಲೇಖನಗಳನ್ನು  ಈ ಕೆಳಗಿನ ಸಂಖ್ಯೆ ಅಥವಾ ಈಮೇಲ್ ಗೆ ಕಳುಹಿಸಿ, ಧನ್ಯವಾದಗಳು!!



ಸಂಖ್ಯೆ: +852 6706 1207 (Tanuja)
ಈಮೇಲ್: thanuja.s06@gmail.com

## ಸಾಮಾಜಿಕ ಜಾಲತಾಣ
## Social Media

ನಮ್ಮ KSHK ಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಳ್ಳಲು, ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಳ್ಳಲು, ನಮ್ಮ ಸಮಿತಿಯ ಸಾಮಾಜಿಕ ಜಾಲತಾಣವನ್ನು ಹೆಚ್ಚಿನ ಸಂಖ್ಯೆಯ್ತಲ್ಲಿ ಫಾಲೋ ಮಾಡಿ.

# ಸ್ಪಂದನ Spandana



ಕನ್ನಡ ಸಂಘ ಹಾಂಗ್ ಕಾಂಗ್ ನ ಮಾಸಪತ್ರಿಕೆ – ಏಪ್ರಿಲ್ & ಮೇ 2024

Kannada Sangha Hong Kong's Monthly Newsletter – April & May 2024

ಸಂಚಿಕೆ 2


## ಮುದ್ದು ರಾಮನ ಚೌಪದಿ
## Poem Time

ಈ ಬಾಳ ಸಂಭ್ರಮಕೆ ಎನಿತು ತಾರನಿವಹ,
ನದಿನಾಲೆ ಗಿರಿಪಂಕ್ತಿ ಕಡಲ ಚೆಲುವೀಚಿ !
ಶ್ರಾವಣದ ಮಳೆಯಂತೆ ಚೈತ್ರದಲಿ ನವಚಿಗುರು.,
ಇನಿತಿರಲು ಕೊರತೆಯೇನ್ ? - ಮುದ್ದುರಾಮ

ಯಾರ ಅಂಕಿತದಲ್ಲಿ ವಚನ ಯಾವುದೆ ಇರಲಿ
ನರನ ಶಿವನಾಗಿಸುವ ಸಾರ ಅನುಭಾವ.
ಅಂತರಂಗದ ಶುದ್ಧಿ ಅದರ ನಿಜ ಆಚಾರ
ಎದೆತುಡಿತ ಪರಮಾರ್ಥ - ಮುದ್ದುರಾಮ

ದಿನದಿನದ ಅಬ್ಬರದ ಸದ್ದು ಗದ್ದಲದಲ್ಲಿ
ಅರಸು ನೀ ಏಕಾಂತ ಸ್ವಾತಂತ್ರ್ಯ ಸುಖವ.
ಇದೆ ಆಗ ಮಾಧುರ್ಯ, ಶ್ರೀಮಂತ ಗಾಂಭೀರ್ಯ
ಇರು ನೀನು ನಿನ್ನಂತೆ - ಮುದ್ದುರಾಮ

**ರಚನೆ: ಕೆ. ಸಿ. ಶಿವಪ್ಪ**

-- ಪ್ರದೀಪ್



## ಕವನ
## Poem Time

**ಅಮ್ಮ.**

ಜೀವ ಸಂಕುಲದಲ್ಲಿ ಸೃಷ್ಟಿಯ ವಿಸ್ಮಯ

ದೇವನು ಮಾಡಿದ ಅಮಾಮ ಎಂಬುವಳ ಪರಿಚಯ.

ಉಪಮಾನ ವಿಲ್ಲದ ಅವಳ ಪ್ರೀತಿ

ಸಲಹುವಳು ನೀಡುತ್ತಾ ಸಂಸ್ಕಾರದ ನೀತಿ.

ಕಲ್ಲಸುವಳು ನಡೆ -ನುಡಿಯ ದಾರಿ ದೀವಿಗಯಾಗಿ

ತೂರುವಳು ಮಮತೆಯನು ಮಡಿಲ ಮಗುವಿಗಾಗಿ.

ತುತ್ತಿಟ್ಟು - ಮುತ್ತಿಟ್ಟು ಬೆಳೆಸುವಳು ನಿಸ್ವಾರ್ಥಿ.

ಶಿಕ್ಷಿಸಿ-ರಕ್ಷಿಸಿ ಕಾಯುವಳು ನಮ್ಮ ಕ್ಷೇಮಾರ್ಥಿ

ನೋವಲ್ಲೂ-ನಲಿವಲ್ಲೂ ಮನ ಕೂಗುವುದು ಅಮ್ಮಾ...ಅಮ್ಮಾ..

ಈ ಲೋಕದಲ್ಲಿ ನಿನ್ನ ಮಿಗಿಲಾರುಂಟು ನೀನೆ ಹೇಳಮ್ಮ

-- ಶೀಲಾ ಎನ್ ಮೂರ್ತಿ

## ಕರ್ನಾಟಕ ತಿಳಿಯೋಣ
## Karnataka Diaries



ನಮ್ಮ ಕನ್ನಡದವರೇ ಆಗಿರುವ ಈ ಪ್ರಸಿದ್ಧ ವ್ಯಕ್ತಿಯನ್ನು ಗುರುತಿಸಿ. ಕನ್ನಡ ಚಿತ್ರರಂಗದ ಬೀಷ್ಮ ಎಂಬ ಪ್ರಖ್ಯಾತಿಯನ್ನು ಹೊಂದಿದವರು, ಹಾಗು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ (National Film Award) ಪುರಸ್ಕೃತರು ಪ್ರಸಿದ್ಧ ಚಲನಚಿತ್ರ ನಿರ್ದೇಶಕರು ಕೂಡ ಆಗಿರುವರು. ಮತ್ತು ನಿರ್ಮಾಪಕರು

ಹಿಂದಿನ ಸಂಚಿಕೆಯ ಉತ್ತರ: ಶಕುಂತಲಾ ದೇವಿ

# ಸ್ಪಂದನ Spandana




**ಕನ್ನಡ ಸಂಘ ಹಾಂಗ್ ಕಾಂಗ್ ನ ಮಾಸಪತ್ರಿಕೆ – ಏಪ್ರಿಲ್ & ಮೇ 2024**

**Kannada Sangha Hong Kong's Monthly Newsletter – April & May 2024**

**ಸಂಚಿಕೆ 2**


## ಅಜ್ಜಿ ಹೇಳಿದ ಕಥೆಗಳು
## Granny's stories



### ಅರಸನ ಉಡುಗೊರೆ

ರೈತನೊಬ್ಬನ ತೋಟದಲ್ಲಿದ್ದ ಸೇಬು ಮರದಲ್ಲಿ ಒಂದೇ ಒಂದು ಹಣ್ಣು ಬೆಳೆಯಿತು. ಆತ ಅದನ್ನು ಕೊಯ್ದು ಇದನ್ನು ತನಗೆ ಅತ್ಯಂತ ಪ್ರೀತಿಪಾತ್ರರಾದ ಯಾರಿಗಾದರೂ ಉಡುಗೊರೆಯಾಗಿ ಕೊಡಬೇಕು ಎಂದು ಯೋಚಿಸಿ ಪ್ರಜೆಗಳ ಕ್ಷೇಮಕ್ಕಾಗಿ ಹಗಲಿರುಳೂ ಚಿಂತಿಸುವ ಅರಸನಿಗೆ ಒಪ್ಪಿಸಲು ನಿರ್ಧರಿಸಿ ಅರಸನ ಸಭೆಗೆ ಹೋದ.

ಅಲ್ಲಿ ಆತ ಸೇಬನ್ನು ಅರಸನ ಮುಂದಿರಿಸಿ 'ದೊರೆಯೇ, ಇದು ಬಹು ವಿಶೇಷವಾಗಿದೆ. ದೇವತೆಗಳ ಕೃಪೆಯಿಂದ ಈ ಏಕೈಕ ಹಣ್ಣು ನನ್ನ ತೋಟದಲ್ಲಿಬೆಳೆದಿದೆ ಎಂದು ಭಾವಿಸಿದ್ದೇನೆ. ಅಮೂಲ್ಯವಾದ ಹಣ್ಣನ್ನು ನನಗೆ ಪ್ರೀತಿಪಾತ್ರರಾದವರಿಗಷ್ಟೇ ಕೊಡಬೇಕು ಎಂದು ನಿರ್ಧರಿಸಿ ತಮಗೆ ಇದನ್ನು ಉಡುಗೊರೆಯಾಗಿ ನೀಡಬೇಕೆಂದು ತಂದಿದ್ದೇನೆ. ಸ್ವೀಕರಿಸಿ' ಎಂದು ನಿವೇದಿಸಿದ.

ಅರಸನು ಸೇಬನ್ನು ಹಿಡಿದು ನೋಡಿದಾಗ ಅದರಲ್ಲಿ ವಿಶೇಷವಿದೆ ಎಂದು ಅವನಿಗನಿಸಲಿಲ್ಲ. ಆದರೆ ಮುಗ್ಧ ರೈತನ ಪ್ರೀತಿಯನ್ನು ಶಂಕಿಸಬಾರದು ಎಂಬ ಕಾರಣಕ್ಕೆ ಸಂತೋಷ ವ್ಯಕ್ತಪಡಿಸಿ 'ನಿಜವಾಗಿಯೂ ಅತ್ಯಮೂಲ್ಯ ಕೊಡುಗೆಯನ್ನೇ ತಂದಿರುವೆ. ಇದಕ್ಕಾಗಿ ನನ್ನಿಂದ ನಿನಗೆ ಏನು ಪ್ರತಿಫಲ ಬೇಕು ಕೇಳು' ಎಂದು ಹೇಳಿದ. ರೈತ ಪ್ರತಿಫಲಕ್ಕೆ ಕೈಯೊಡ್ಡದೆ 'ಎಲ್ಲಾದರೂ ಉಂಟೆ? ಪ್ರೀತಿಯ ಕೊಡುಗೆಗೆ ಪ್ರತಿಫಲ ಸ್ವೀಕರಿಸುವುದು ಉಚಿತವಲ್ಲ' ಎಂದು ನಿರಾಕರಿಸಿದ. ಬರಿಗೈಯಲ್ಲಿ ರೈತನನ್ನು ಕಳುಹಿಸಲು ಅರಸನ ಮನವೊಪ್ಪದೆ ಮಂತ್ರಿಗಳೊಂದಿಗೆ ಸಮಾಲೋಚಿಸಿದಾಗ ಮಂತ್ರಿಗಳು 'ಆತ ಕಾಲಿಗೆ ಹಾಕಲು ಒಳ್ಳೆಯ ಪಾದರಕ್ಷೆಗಳು ಕೂಡ ಇಲ್ಲದೆ ಕಷ್ಟಪಟ್ಟು ನಡೆದು ಇಲ್ಲಿಗೆ ಬಂದಿದ್ದಾನೆ. ಅವನಿಗೆ ಸವಾರಿಗೆ ಯೋಗ್ಯವಾದ ಒಳ್ಳೆಯ ಕುದುರೆ ಕೊಡಬೇಕು. ಕುದುರೆಯ ಮೇಲೆ ಅದಕ್ಕೆ ಹೊರಲು ಸಾಧ್ಯವಿರುವಷ್ಟು ಚಿನ್ನದ ನಾಣ್ಯಗಳ ಮೂಟೆಯನ್ನಿರಿಸಿದರೆ ಆತ ಸುಖದಿಂದ ಬದುಕಲು ನೆರವಾಗುತ್ತದೆ' ಎಂದು ಹೇಳಿದರು.

ಹೀಗೆ ಅರಸನು ಕೊಡುಗೆಯಾಗಿ ನೀಡಿದ ಕುದುರೆಯ ಮೇಲೆ ಕುಳಿತುಕೊಂಡು ರೈತ ಮನೆಯ ದಾರಿ ಹಿಡಿದ. ಆತನ ಮನೆಯ ಪಕ್ಕದಲ್ಲಿ ಒಬ್ಬ ಶ್ರೀಮಂತ ರೈತನಿದ್ದ. ಅವನು ಯಾರಿಗೂ ಕೊಳೆತ ಹಣ್ಣು ಕೂಡ ಉಚಿತವಾಗಿ ಕೊಡುವವನಲ್ಲ. ಆತ ಒಳ್ಳೆಯ ಕುದುರೆಯನ್ನೇರಿಕೊಂಡು ಬರುತ್ತಿರುವ ಬಡ ರೈತನನ್ನು ಕಂಡು ಬೆರಗಾಗಿ ಅವನನ್ನು ತಡೆದು ನಿಲ್ಲಿಸಿ 'ನಿನ್ನೆ ತನಕ ಹೊಲ ಉಳಲು ಮುದಿ ಎತ್ತನ್ನು ಕೊಳ್ಳಲು ನಿನ್ನ ಬಳಿ ಶಕ್ತಿಯಿರಲಿಲ್ಲ. ಆದರೆ ಇಂದು ಲಕ್ಷ ಲಕ್ಷ ಬೆಲೆ ಬಾಳುವ ಕುದುರೆಯ ಮೇಲೆ ಕುಳಿತುಕೊಂಡು ಬರುತ್ತಾ ಇದ್ದೀ ಅಂದರೆ ಏನು ಸಮಾಚಾರ?' ಎಂದು ಕೇಳಿದ. ಅದಕ್ಕೆ ರೈತ 'ಇದು ಪ್ರಾಮಾಣಿಕವಾಗಿಯೇ ದೊರಕಿದೆ. ನನ್ನ ತೋಟದಲ್ಲಿಕೆಂಪು ಬಣ್ಣದ ದೊಡ್ಡ ಸೇಬು ಆಗಿತ್ತಲ್ಲ. ಅದು ಬಹಳ ಅಪೂರ್ವವಾದುದೆಂದು ನನಗೆ ಗೊತ್ತಾಗಿ ಅದನ್ನು ಅರಸರಿಗೆ ಉಡುಗೊರೆಯಾಗಿ ಕೊಟ್ಟೆ. ಅವರು ನನಗೆ ಈ ಕುದುರೆ ಕೊಟ್ಟರು ಮತ್ತು ಬಂಗಾರದ ನಾಣ್ಯಗಳ ಮೂಟೆಯನ್ನೂ ಹೊರಿಸಿ ಕಳುಹಿಸಿದರು' ಎಂದ.

ಶ್ರೀಮಂತನು ತನ್ನ ತೋಟದಲ್ಲಿಒಂದಕ್ಕಿಂತ ಒಂದು ಹೆಚ್ಚು ಆಕರ್ಷಕವಾಗಿರುವ ಸೇಬು ಹಣ್ಣುಗಳು ಬೇಕಾದಷ್ಟಿವೆ. ಒಂದು ಹಣ್ಣಿಗೆ ಒಂದು ಕುದುರೆ, ಒಂದು ಮೂಟೆ ಚಿನ್ನ ಸಿಗುವುದಾದರೆ ತನ್ನ ಮನೆಯನ್ನು ಅದರಿಂದಲೇ ತುಂಬಿಸಬಹುದು ಎಂದು ಲೆಕ್ಕ ಹಾಕಿದ. ಅವನು ಚಂದಚಂದದ ಸೇಬು ಹಣ್ಣುಗಳನ್ನು ಕೊಯ್ಯಿಸಿ ಗಾಡಿ ತುಂಬ ಹೇರಿಕೊಂಡು ಅರಸನ ಸನ್ನಿಧಿಗೆ ಹೋಗಿ 'ನಾನು ಬಡ ರೈತ. ನನ್ನ ತೋಟದಲ್ಲಿ ಅತ್ಯಮೂಲ್ಯವಾದ ಸೇಬು ಹಣ್ಣುಗಳು ರಾಶಿರಾಶಿಯಾಗಿ ಬೆಳೆದಿವೆ. ಇದು ಯೋಗ್ಯರಾದವರ ಬಳಿಗೆ ಸೇರಬೇಕು ಎಂಬ ಆಶಯದಿಂದ ಎಲ್ಲವನ್ನೂ ಕೊಯ್ಯಿಸಿ ತಮಗೆ ಸಮರ್ಪಿಸಲು ತಂದಿದ್ದೇನೆ' ಎಂದ. ಅದಕ್ಕೆ ಅರಸ 'ತುಂಬಾ ಸಂತೋಷವಾಯಿತು. ಈ ಹಣ್ಣುಗಳಿಗಾಗಿ ನೀನು ಯಾವ ಪ್ರತಿಫಲ ಬೇಕು ಎಂದು ಬಯಸಿದರೂ ಅದನ್ನು ಕೊಡುವ ವ್ಯವಸ್ಥೆ ಮಾಡುತ್ತೇನೆ' ಎಂದು ಹೇಳಿದ. ಅದಕ್ಕೆ ರೈತ 'ನಾನು ಇದನ್ನು ತಂದಿದ್ದು ಪ್ರತಿಫಲದ ಬಯಕೆಯಿಂದ ಅಲ್ಲವೇ ಅಲ್ಲ. ನನಗೆ ಏನೂ ಬೇಡ' ಎಂದು ಹೇಳಿದಾಗ ಅರಸ 'ಪ್ರಜೆಗಳಿಂದ ನಾನು ಯಾವ ವಸ್ತುವನ್ನೂ ಉಚಿತವಾಗಿ ಸ್ವೀಕರಿಸುವುದಿಲ್ಲ. ಅದಕ್ಕೆ ಪ್ರತಿಫಲ ಕೊಡಲೇಬೇಕಾಗುತ್ತದೆ. ಏನು ಬೇಕಿದ್ದರೂ ಕೇಳು. ಕೊಡುತ್ತೇನೆ' ಎಂದ.

ಶ್ರೀಮಂತ ರೈತ ಮನಸ್ಸಿನಲ್ಲೇ ಸಂತೋಷಪಟ್ಟು 'ಅರಸರು ಪ್ರೀತಿಯಿಂದ ಏನು ಕೊಟ್ಟರೂ ಅದನ್ನು ತೆಗೆದುಕೊಳ್ಳುತ್ತೇನೆ' ಎಂದು ಹೇಳಿದ. ಗಾಡಿ ತುಂಬ ಹಣ್ಣು ತಂದಿರುವ ಇವನು ಬಡವನಲ್ಲ ಎಂದು ನಿರ್ಧರಿಸಿ ಅರಸ ಆತನ ಬೆರಳುಗಳಲ್ಲಿ ಉಂಗುರಗಳನ್ನು ಧರಿಸಿರುವ ಗುರುತನ್ನು ಕಂಡು ಆತ ದುಡಿಯುವವನೂ ಅಲ್ಲ ಅನಿಸಿತು. ಆತ ಬಡ ರೈತ ತಂದುಕೊಟ್ಟಿದ್ದ ಸೇಬು ಹಣ್ಣನ್ನು ಒಳಗಿನಿಂದ ತರಿಸಿ ಶ್ರೀಮಂತ ರೈತನ ಕೈಯಲ್ಲಿಟ್ಟು 'ಇದು ನನಗೆ ತುಂಬಾ ಪ್ರೀತಿಯ ಹಣ್ಣು. ಬಡ ರೈತನೊಬ್ಬನ ಶ್ರಮದ ಫಲ. ಇದರ ಬೆಲೆ ಕಟ್ಟಲಾಗದು. ಇದನ್ನು ತೆಗೆದುಕೊಂಡು ಹೋಗು' ಎಂದು ಹೇಳಿದಾಗ ಶ್ರೀಮಂತ ರೈತ ಪೆಚ್ಚು ಮೋರೆ ಹಾಕಿಕೊಂಡು ಮನೆಗೆ ಬಂದ.



# ಸ್ಪಂದನ  Spandana

**ಕನ್ನಡ ಸಂಘ ಹಾಂಗ್ ಕಾಂಗ್ ನ ಮಾಸಪತ್ರಿಕೆ – ಏಪ್ರಿಲ್ & ಮೇ 2024**

**Kannada Sangha Hong Kong's Monthly Newsletter – April & May 2024**

**ಸಂಚಿಕೆ 2**


## ಬಾ ಮಳೆಯೇ ಬಾ
## Rainy Days

ಪ್ರಕೃತಿಯ ನಿಯಮಗಳಲ್ಲಿ ಮಳೆಯ ಪಾತ್ರ ಬಹಳ ಮಹತ್ವ ಎನಿಸುವುದು

ವನ್ಯಸಿರಿ, ಪ್ರಾಣಿ - ಪಕ್ಷಿಗಳ ಸಂಕುಲ ಹಾಗು ಮಾನವನ ಬದುಕು ಸುಖಮಯವಾಗಿರಬೇಕಾದರೆ ವರುಣನ ಕೃಪೆ ಇರಲೇಬೇಕು

ಇಳೆಯನ್ನು ತಣಿಸಿ, ರೈತರನ್ನು ನಗಿಸಿ, ಕಾಮನ ಬಿಲ್ಲನ್ನು ಮೂಡಿಸಿ, ನವಿಲನ್ನು ಕುಣಿಸುವ ಶಕ್ತಿ ಮಳೆಯಲ್ಲಿ ತುಂಬಿದೆ

ಮಳೆ ಬರಿ ಎರೆಡಕ್ಷರದ ಪದವಲ್ಲ, ನವರಸಗಳು ತುಂಬಿರುವ ಪ್ರಕ್ರಿಯೆ ಬರಡಾದ ಭೂಮಿಯಮೇಲೆ ಮಳೆ ಹನಿಗಳು ಬಿದ್ದಾಗ ಪ್ರಕೃತಿಯ ಸಡಗರ ವರ್ಣಿಸಲಾಗದು. ಧರಣಿ ತಂಪಾಗುವ ಭರಣಿ ಮಳೆ, ಬಿತ್ತಿದ ಭೀಜ ಅಂಕುರಿಸುವ ರೋಹಿಣಿ ಮಳೆ, ತುಂತುರು-ತುಂತುರಾಗಿ ಸುರಿಯುವ ಮೃಗಶೀರೆಯ ಮಳೆ, ಹನಿ ಮುತ್ತುಗಳ ಮಣಿಗಳಂತೆ ಹೂವು ಎಳೆಗಳ ಮೇಲೆ ಕುಳಿತು ನಗುವ ಸ್ವಾತಿ ಮಳೆ, ಹೀಗೆ ವರ್ಣಿಸಿದಷ್ಟು ವೈಶಿಷ್ಟ್ಯ ತುಂಬಿದೆ ಈ ವರ್ಷಧಾರೆಯಲ್ಲಿ.

ಮಳೆ ಎಂದರೆ ಬಾಲ್ಯದ ನೆನಪು, ಮಳೆ ಎಂದರೆ ಯವ್ವನದ ಸವಿ ನೆನಪು, ಮಳೆ ಎಂದರೆ ಬದುಕಿನ ಸಂಜೆಯಲ್ಲಿ ಕುಳಿತು ಸರಿದು ಹೋದ ಜೀವನದ ಸಿಂಹಾವಲೋಕನ, ಮಳೆ ಎಂದರೆ ಭಾವಗಳ ಮಜಲುಗಳ ಭಾವಗೀತೆ.

ಮಳೆಯ ಹಾಡುಗಳಂತೂ ಕವಿಗಳ ಭಾವನೆಗಳ ಮೆಲುಕು ಕಲ್ಪನೆಗಳ ಸರಕುಗಳು ಭಾವಗೀತೆಗಳಾಗಿ, ಜನಪದಗೀತೆಗಳಾಗಿ ಜನ-ಮನಗಳ ಗೆದ್ದು ಬೀಗಿದೆ.
ಧರಣಿಯ ದಾಹ ತಣಿಸುವ ಸಂಜೀವಿನಿ ಮಳೆ ಎನ್ನಬಹುದು. ನಗಿಸಿ ನಗಿಸಬಲ್ಲ ಈ ಮಳೆ ಪ್ರಕುತಿ ವಿಕೋಪಕ್ಕೆ ಹೋದಾಗ ಭೂಮಿಯ ನಡುಗಿಸಿ ನಶಿಸಿ ನೆಲಸಮ ಮಾಡಬಲ್ಲದು. ಬದುಕಿಗೂ ಮಳೆಗೂ ಅವಿನಾಭಾವ ಬಂಧಿವಿದೆ.

ಸುಖ-ದುಃಖ, ನೋವು - ನಲಿವು, ಜನನ-ಮರಣ ತುಂಬಿರುವ ಜೀವನ ಧಾರೆ ನಮ್ಮದಾದರೆ, ಕಾಲ-ಕಾಲಕ್ಕೆ ಮಳೆ ಸುರಿದು ಜೀವನ ಸಮೃದ್ಧಿ ಸುಖಮಯವೆನಿಸುವುದೇ ವರ್ಷಧಾರೆ, ಇದೂ ನಿನಗೆ ನನ್ನ ನಮನ.

ಕಡೆಯದಾಗಿ, ಭಾವಗೀತೆಯಲ್ಲಿ ಈ ಮಳೆಯ ಈ ಹಾಡು ಪ್ರಿಯತಮೆಗಾಗಿ ಕಾಯುತಿಹ ಪ್ರೀತಮಾನ ಮನ ಮಿಡಿದ ಬಿ.ಆರ್.ಲಕ್ಷ್ಮಣ್ ರವರ ಕೃತಿಯಲ್ಲಿ ಸೊಗಸಾಗಿ ಮೂಡಿ ಬಂದು ಕಾಡುವುದು ಮನ ಕಲ್ಪನಾ ಲೋಕದಲ್ಲಿ.

## ಮೆದುಳಿಗೆ ಸ್ವಲ್ಪ ಕೆಲಸ!
## Scratch your head!

**ಒಗಟು ಬಿಡಿಸಬಲ್ಲಿರಾ?**

1. ಬಿಳಿ ಸಾಮ್ರಾಜ್ಯದಲ್ಲಿ ಕಪ್ಪು ಪ್ರಜೆಗಳು
2. ನಾನು ತುಳಿದೆ ಅದನ್ನ, ಅದು ತುಳಿತು ನನ್ನನ್ನ
3. ಬಿಳಿ ತೊಟ್ಟಿಯಲ್ಲಿ ಕಪ್ಪು ದ್ರಾಕ್ಷಿ
4. ಹೋದರು ಇರುತ್ತೆ ಬಂದರು ಕಾಡುತ್ತೆ,ಏನು ಇದು ?
5. ಅಕ್ಕಾತಂಗೆರು ಮೂವರು ಕೆರಿಯಾಗ ಬಿದ್ರು ಒಬ್ಬಾಗಿ ಮುಳಗಿದಳು, ಒಬ್ಬಾಕಿ ತೇಲಿದಳು, ಮತ್ತೊಬ್ಬಾಕಿ ಕರಗಿ ಹೋದಳು, ಯಾರಿವರು?

--- ಶಿಲ್ಪ ವಿಜಯಕುಮಾರ್ ---

---

ಹಿಂದಿನ ಸಂಚಿಕೆಯ ಉತ್ತರ :
೧. ನವಿಲು
೨. ಕನ್ನಡಿ
೩. ಗಾಳಿ
೪. ವಿಬುತಿ, ಕುಂಕುಮ
೫. ಛತ್ರಿ



## ಚಿಣ್ಣರ ಚಿಲಿಪಿಲಿ



Advik



Shreya



Yathish Tejal



Srija



## ಪ್ರಾಯೋಜಕರು
## Sponsorer


LUVENUS

BEAUTY REDEFINED IN GOLD

luvenus.com enquiry@luvenus.com luvenushongkong


## ಮುಂದಿನ ಸಂಚಿಕೆಗೆ ನಿರೀಕ್ಷಿಸಿ!